Sri S R. More KGF city is not come under Asian Development Bank You don't have so much resources

ಅಧ್ಯಕ್ಷರು ಮಾನ್ಯ ರಾಜೇಂದ್ರ್‌ರವರೆ, ಸಚಿವರು ಉತ್ತರ ಕೊಟ್ಟಿದ್ದಾರೆ. ನೀವು ಕೇಳಿದ್ದಕ್ಕೆಲ್ಲಾ ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಅವರು ಸ್ಪಷ್ಟವಾಗಿ ಹೇಳಿದ್ದಾರೆ ಕೆಲವು ಪ್ರಾಜೆಕ್ಟ್ಸ್ ಏನಿವೆ, ಅದರಲ್ಲಿ ಬರುವುದಿಲ್ಲ ನಿಮ್ಮ ಕೆ ಜಿ ಎಫ್ ಯಾವ ಯೋಜನೆಯಲ್ಲಿ ಬರುತ್ತದೋ ಅದಕ್ಕೆ 550 ಲಕ್ಷ ರೂ ಕೊಡುತ್ತೇವೆಂದು ಹೇಳಿದ್ದಾರೆ ಇನ್ನೇನು ಬಯಸುತ್ತೀರಿ ಅವರಿಂದ

Sri S Rajendran I request my Hon'ble Minister to take up right now a big project There is no infrastructure in KGF What maximum you can do for my city you come forward and assure on this floor of the House

ಶ್ರೀ ಎಸ್ ಆರ್ ಮೋರೆ ಪರಿಶೀಲನೆ ಮಾಡುತ್ತೇನೆ

Sri S Rajendran You please assure this House Something should be done to develop my city

ಶ್ರೀ ಎಸ್ ಆರ್ ಮೋರೆ ಐ ಡಿ ಎಸ್ ಎಂ ಟಿ ಪ್ರಕಾರ ನಾವು ಈಗಾಗಲೇ ಕೆಲಸವನ್ನು ಆರಂಭ ಮಾಡಿದ್ದೇವೆ ನಿಮ್ಮ ಮುನಿಸಿಪಾಲಿಟಿಯವರಿಗೆ, ಡೆಲ್ಲಿಯವರು ಕ್ಲಾರಿಫಿಕೇಷನ್ ಕೇಳಿದ್ದಾರೆ, ಈ ವಾರ ಕ್ಲಾರಿಫಿಕೇಷನ್ ಕ್ಲಿಯರ್ ಮಾಡಿದರೆ, ಮುಂದಿನ ವಾರವೇ ಶುರು ಮಾಡುತ್ತೇವೆ

Sri S Rajendran If decision is not taken in the right time, you supersede the Municipality For the past 4 1/2 years no development had taken place at all

ಶ್ರೀ ಎಸ್ ಆರ್ ಮೋರೆ ಆ ಮುನಿಸಿಪಾಲಿಟಿಗೆ ಸಂಬಂಧಿಸಿದ ಅಧಿಕಾರಿಯನ್ನು ಇವತ್ತೇ ಕಳುಹಿಸುತ್ತೇನೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳಿಗೆ ನಿರ್ಮಿತವಾದ ಷೆಡ್ಡುಗಳನ್ನು ಕೈಗಾರಿಕೇತರ ಉದ್ದೇಶಗಳಿಗೆ ಬಳಕೆ

135(883) ಶ್ರೀ ಶಿವಶಂಕರರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳನ್ನು ತೆರೆಯಲು ವಿಶೇಷ ಯೋಜನೆಯಡಿಯಲ್ಲಿ 4 ಕಡೆಗಳಲ್ಲಿ ಶೆಡ್‌ಗಳನ್ನು ನಿರ್ಮಿಸಿ ಸಂಬಂಧಪಟ್ಟವರಿಗೆ ಈ ಹಿಂದೆ ನೀಡಲಾಗಿದೆ ಶೆಡ್‌ಗಳು ಸೂಚಿತ ಉದ್ದೇಶಕ್ಕೆ ಉಪಯೋಗಿಸದೇ ಅಕ್ರಮ ಕೆಲಸಗಳಿಗೆ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಷೆಡ್‌ಗಳನ್ನು ಅನ್ಯ ಉದ್ದೇಶಗಳಿಗೆ (ಕೈಗಾರಿಕೇತರ) ಬಳಸಲು ಕಾನೂನಿನಲ್ಲಿ ಅವಕಾಶವಿದೆಯೆ,

ಇ) ಇಲ್ಲದಿದ್ದಲ್ಲಿ ಇಂತಹ ಷೆಡ್‌ಗಳನ್ನು ಮುಟ್ಟುಗೋಲು ಹಾಕಲು ಕಾನೂನಿನಲ್ಲಿ ಅವಕಾಶವಿಲ್ಲವೇ,

ಈ) ಇದ್ದಲ್ಲಿ ಕ್ರಮ ತೆಗೆದುಕೊಳ್ಳದ ಅಧಿಕಾರಿಗಳ ಮೇಲೆ ಸರ್ಕಾರ ಸೂಕ್ತ ಕ್ರಮ ಜರುಗಿಸುವುದು?

ಶ್ರೀ ಪಿ ಜಿ ಆರ್ ಸಿಂಧ್ಯಾ (ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಅಭಿವೃದ್ಧಿ ಸಚಿವರು)

ಅ) ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ವಿಶ್ವ ಯೋಜನೆಯಡಿಯಲ್ಲಿ 6 ಶೆಡ್‌ಗಳನ್ನು ನಿರ್ಮಿಸಲಾಗಿದ್ದು, ಶೆಡ್‌ಗಳನ್ನು ಸಂಘ / ಸಂಸ್ಥೆಗಳಿಗೆ / ಘಟಕಗಳಿಗೆ ಹಂಚಿಕೆ ಮಾಡಲಾಗಿದೆ ಶೆಡ್‌ಗಳನ್ನು ಸೂಚಿತ ಉದ್ದೇಶಕ್ಕೆ ಉಪಯೋಗಿಸದೇ ಅಕ್ರಮ ಕೆಲಸಗಳಿಗೆ ಬಳಸುತ್ತಿರುವ ಬಗ್ಗೆ ಯಾವುದೇ ಪ್ರಕರಣ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ

ಆ) ಅನ್ಯ ಉದ್ದೇಶಗಳಿಗೆ ಶೆಡ್‌ಗಳನ್ನು ಬಳಸಲು ಯೋಜನೆಯಡಿಯಲ್ಲಿ ಅವಕಾಶವಿರುವುದಿಲ್ಲ

ಇ) ಉದ್ದೇಶಿತ ಚಟುವಟಿಕೆಗಾಗಿ ಶೆಡ್‌ನ್ನು ಹಂಚಿಕೆ ಪಡೆದವರು ವಿನಿಯೋಗಿಸಿಕೊಳ್ಳದೇ ಅನ್ಯ ಉದ್ದೇಶಕ್ಕಾಗಿ ಬಳಸಿಕೊಂಡಲ್ಲಿ ಹಂಚಿಕೆಯನ್ನು ಉದ್ದುಪಡಿಸಲು ಅವಕಾಶವಿರುತ್ತದೆ

ಈ) ಅನ್ಯ ಉದ್ದೇಶಕ್ಕಾಗಿ ಶೆಡ್‌ಗಳನ್ನು ಬಳಸುತ್ತಿರುವ ಬಗ್ಗೆ ದೂರುಗಳು ಇಲಾಖೆಗೆ ಬಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ವಿಶ್ವ ಶೆಡ್‌ಗಳ ಹಕ್ಕುದಾರರಾದ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಅವರ ಗಮನಕ್ಕೆ ತರಲಾಗುವುದು

ಶ್ರೀ ಎನ್ ಹೆಚ್ ಶಿವಶಂಕರರೆಡ್ಡಿ ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ಆರು ವಿಶ್ವ ಶೆಡ್‌ಗಳು ಇವೆ ಅದರಲ್ಲಿ 3–4 ಷೆಡ್‌ಗಳಲ್ಲಿ ಯಾವುದೇ ಕೈಗಾರಿಕಾ ಚಟುವಟಿಕೆ ನಡೆಯುತ್ತಾ ಇಲ್ಲ ಕಳೆದ 3–4 ವರ್ಷಗಳಿಂದ ಬೇರೆ ಚಟುವಟಿಕೆಗಳಿಗೆ ಈ ಷೆಡ್‌ಗಳನ್ನು ಉಪಯೋಗಿಸುತ್ತಿದ್ದಾರೆ ನಾನು ಗಮನಿಸಿ, ಸಂಬಂಧಿಸಿದ ಇಲಾಖೆಯವರಿಗೆ ಸೂಚನೆ ಕೊಟ್ಟರೂ, ಅಲ್ಲಿ ಯಾವುದೇ ಕೈಗಾರಿಕಾ ಚಟುವಟಿಕೆಗಳು ನಡೆಯುತ್ತಾ ಇಲ್ಲ ಆದ್ದರಿಂದ, ಅವುಗಳನ್ನು ಬೇರೆಯವರಿಗೆ ಕೊಡತಕ್ಕ ವ್ಯವಸ್ಥೆ ಮಾಡಬೇಕು ಹಾಗೆಯೇ, ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೆರಡು ಪ್ರಶ್ನೆಗಳನ್ನು ಕೇಳಿದ್ದೆ ಒಂದು ಲಿಖಿತ ರೂಪದ ಪ್ರಶ್ನೆಗಳ ಪಟ್ಟಿಯಲ್ಲಿ ಬಂದಿದೆ ನಮ್ಮ ಪಟ್ಟಣದ ಪಕ್ಕದಲ್ಲಿರತಕ್ಕ ಹಿರೇಬಿದನೂರು ಹತ್ತಿರ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಇದೆ ಅಲ್ಲಿ ಸುಮಾರು 10–15 ನಿವೇಶನಗಳನ್ನು ಕೈಗಾರಿಕೆಗಳನ್ನು ತೆಗೆಯುವುದಕ್ಕೆ ಹಂಚಿದ್ದಾರೆ ರಿಜಿಸ್ಟ್ರೇಷನ್ ಮಾಡಿಕೊಟ್ಟಿದ್ದಾರೆ ಸುಮಾರು 4–5 ವರ್ಷಗಳಾದರೂ ಕೂಡ ಅಲ್ಲಿ ಯಾವುದೇ ಇಂಡಸ್ಟ್ರೀಸ್ ಬಂದಿಲ್ಲ ಹಾಗಾಗಿ, ಅದನ್ನು ಪುನ ಇಲಾಖೆಗೆ ತೆಗೆದುಕೊಂಡು, ಬೇರೆ ಯಾರು ಇಂಡಸ್ಟ್ರೀಸ್ ಮಾಡುವುದಕ್ಕೆ ತಯಾರು ಇದ್ದಾರೆ, ಅವರಿಗೆ ಕೊಡತಕ್ಕ ಕೆಲಸವನ್ನು ಮಾಡುತ್ತಾರೆಯೇ ಎಂದು ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಪಿ ಜಿ ಆರ್ ಸಿಂಧ್ಯಾ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳನ್ನು ನಾನು ಗಮನದಲ್ಲಿಟ್ಟುಕೊಂಡು ಅವರನ್ನು ಕರೆಸಿ ಕುಳಿತು ಮಾತನಾಡಿ ಅಧಿವೇಶನದ ನಂತರ ಆ ಸಮಸ್ಯೆಯನ್ನು ಬಗೆ ಹರಿಸಿಕೊಡುತ್ತೇನೆ

ಅಧ್ಯಕ್ಷರು ಪ್ರಶ್ನೋತ್ತರ ಮುಗಿಯಿತು ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಮಧ್ಯಮ ಮತ್ತು ಸಣ್ಣ ಕೈಗಾರಿಕೆ ಸಚಿವರು) ಮಾನ್ಯ ಅಧ್ಯಕ್ಷರೆ ದಿನಾಂಕ 29–7–2004ರ ಪಟ್ಟಿ 8ರಲ್ಲಿನ ಲಿಖಿತ ಮೂಲಕ ಉತ್ತರಿಸುವ 126 ಪ್ರಶ್ನೆಗಳ ಪೈಕಿ 116 ಉತ್ತರಗಳನ್ನು ಹಾಗೂ ದಿನಾಂಕ 30–7–2004ರ 9ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 40 ಪ್ರಶ್ನೆಗಳ ಪೈಕಿ 34 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು

3 ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಹಾಗೂ ಮೂಲ ಭೂತ ಸೌಕರ್ಯ ಅಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ

I 1984ರ ಕರ್ನಾಟಕ ಲೋಕಾಯುಕ್ತರ ಅಧಿನಿಯಮ ಪರಿಚ್ಛೇದ 12(7)ರ ಅನ್ವಯ

1 ಶ್ರೀ ಪಿ ಕೆ ಗಾರ್ಗ್, ಐ ಪಿ ಎಸ್ (ಕೆ ಎನ್ 89) ಇವರ ವಿರುದ್ಧ ಇಲಾಖಾ ವಿಚಾರಣೆಯ ಉಪ ಲೋಕಾಯುಕ್ತರವರ ವಿಶೇಷ ವರದಿ

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300 (5)ನೇ ಪ್ರಕರಣದ ಮೇರೆಗೆ

1. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಬೆಂಗಳೂರು 1999–2000ನೇ ಸಾಲಿನ ವಾರ್ಷಿಕ ಲೆಕ್ಕ ತನಿಖಾ ವರದಿ

2 ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ವರದಿ

3 ಧಾರವಾಡ ಜಿಲ್ಲಾ ಪಂಚಾಯತ್‌ನ 2000–01ನೇ ಸಾಲಿನ ಲೆಕ್ಕಪತ್ರಗಳು ಮತ್ತು ಲೆಕ್ಕಪತ್ರಗಳ ಮೇಲಿನ ಪ್ರತ್ಯೇಕ ಲೆಕ್ಕ ಪರಿಶೋಧನಾ ವರದಿ

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ

1. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ, ಹಾವೇರಿಯ 2002–03ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

2 ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ